# ಪತ್ರಿಕಾ ಪ್ರಕಟಣೆ

ದಿನಾಂಕ: 18-08-2023

ವಿದೇಶಿಯರು ಮಂಗಳೂರು ನಗರಕ್ಕೆ ಆಗಮಿಸಿದಾಗ ನಗರದ ಹೋಟೆಲ್/ ಲಾಡ್ಜ್/ ಅತಿಥಿ ಗೃಹ, ಸರ್ವಿಸ್ ಅಪಾರ್ಟ್‌ಮೆಂಟ್‌ಗಳಲ್ಲಿ ವಾಸ್ತವ್ಯ ಹೂಡಲಿರುತ್ತಾರೆ ಹಾಗೂ ಅನಾರೋಗ್ಯದ ಸಮಸ್ಯೆಗಳಿಂದಾಗಿ ಚಿಕಿತ್ಸೆ ಬಗ್ಗೆ ನಗರದ ಆಸ್ಪತ್ರೆಗಳಿಗೆ ಭೇಟಿ ನೀಡಿದ ಸಂದರ್ಭದಲ್ಲಿ ಆನ್‌ಲೈನ್ ಮುಖಾಂತರ C-Form ಮತ್ತು ವಿದೇಶಗಳಿಂದ ಶಿಕ್ಷಣದ ಬಗ್ಗೆ ಮಂಗಳೂರು ನಗರದ ವಿವಿಧ ಶಿಕ್ಷಣ ಸಂಸ್ಥೆಗಳಿಗೆ ಆಗಮಿಸಿದ ವಿದೇಶಿ ವಿದ್ಯಾರ್ಥಿಗಳು ವ್ಯಾಸಾಂಗ ಮಾಡುತ್ತಿರುವ ಶಿಕ್ಷಣ ಸಂಸ್ಥೆಗಳಿಂದ ಮಾಹಿತಿಯನ್ನು ಆನ್‌ಲೈನ್ ಮುಖಾಂತರ ನೊಂದಾಯಿಸಿಕೊಳ್ಳುವ ಆನ್‌ಲೈನ್ ಮುಖಾಂತರ S-Form ನಲ್ಲಿನ ವಿದೇಶಿಯರ ಮಾಹಿತಿಗಳನ್ನು ಕಡ್ಡಾಯವಾಗಿ ನೋಂದಾಯಿಸುವಂತೆ ಈಗಾಗಲೇ ಈ ಹಿಂದೆ ಪತ್ರಿಕಾ ಪ್ರಕಟಣೆ ಹಾಗೂ ಸಭೆಗಳಲ್ಲಿ ನಗರದ ಹೋಟೆಲ್/ಲಾಡ್ಜ್/ಅತಿಥಿ ಗೃಹ /ಸರ್ವಿಸ್ ಅಪಾರ್ಟ್‌ಮೆಂಟ್ ಹಾಗೂ ಶಿಕ್ಷಣ ಸಂಸ್ಥೆಗಳು ಹಾಗೂ ಇತರ ಪ್ರಾಧಿಕಾರಗಳಿಗೆ ಮನವಿ ಮಾಡಲಾಗಿರುತ್ತದೆ. ಆದರೂ ಕೆಲವು ವಿದೇಶಿಗರು ತಂಗುವಂತಹ ಹೋಟೇಲ್. / ಲಾಡ್ಜ್/ ಅತಿಥಿ ಗೃಹ, ಸರ್ವಿಸ್ ಅಪಾರ್ಟ್‌ಮೆಂಟ್ ಹಾಗೂ ಶಿಕ್ಷಣ ಸಂಸ್ಥೆಗಳಲ್ಲಿ ನಿಗದಿತ ಸಮಯಕ್ಕೆ ವಿದೇಶಿಗರ ಮಾಹಿತಿಯನ್ನು ಆನ್‌ಲೈನ್ ಮುಖಾಂತರ C-Form ಮತ್ತು S-Form ನಲ್ಲಿ ನಮೂದಿಸದೇ ಇರುವುದನ್ನು ಗಮನಿಸಲಾಗಿದೆ.

ರಾಷ್ಟ್ರೀಯ ಭದ್ರತಾ ಹಿತದೃಷ್ಟಿಯಿಂದ ವಿದೇಶದಿಂದ ಆಗಮಿಸುವ ವಿದೇಶಿಗರ ಚಲನವಲನಗಳ ಸ್ಪಷ್ಟ ಮಾಹಿತಿಯನ್ನು ಹೊಂದಿರುವುದು ಅತ್ಯಗತ್ಯವಾಗಿರುತ್ತದೆ. ಹಾಗೂ ವಿದೇಶಿಗರ ಕಾಯ್ದೆ 1946 ರ ಕಲಂ: 7 ಮತ್ತು 13 ರಂತೆ ವಿದೇಶಿಗರು ನಗರದಲ್ಲಿ ತಂಗುವಂತಹ ವಾಸ ಸ್ಥಳದ ಮಾಹಿತಿಯನ್ನು ಅವರುಗಳು ವಾಸ್ತವ್ಯ ಹೂಡಿದ 24 ಗಂಟೆಯ ಒಳಗಾಗಿ ಮಾಹಿತಿಯನ್ನು C-Form ನಲ್ಲಿ ಆನ್‌ಲೈನ್ ಮೂಲಕ ಆಗಮನ ಮತ್ತು ನಿರ್ಗಮನದ ದಿನಾಂಕ ಮತ್ತು ಸಮಯವನ್ನು ನಮೂದಿಸುವುದು ಕಡ್ಡಾಯವಾಗಿರುತ್ತದೆ.

ಆದುದರಿಂದ ವಿದೇಶಿಯರು ವಾಸ್ತವ್ಯವಿರುವ ಮತ್ತು ನಿರ್ಗಮಿಸುವ ಹೋಟೆಲ್, ಆಸ್ಪತ್ರೆ, ಹಾಸ್ಟೆಲ್, ಬಾಡಿಗೆ ಮನೆ, ಶಿಕ್ಷಣ ಸಂಸ್ಥೆಗಳು/ವಿಶ್ವವಿದ್ಯಾನಿಲಯಗಳು ಕಡ್ಡಾಯವಾಗಿ ಆನ್‌ಲೈನ್‌ನ C-Form ನಲ್ಲಿ ನೋಂದಾಯಿಸುವಂತೆ ಹಾಗೂ ಅಲ್ಲಿ ವಾಸ್ತವ್ಯವಿರುವ ವಿದೇಶಿಯರ ಮಾಹಿತಿಯನ್ನು 24 ಗಂಟೆಯ ಒಳಗಾಗಿ ಆನ್‌ಲೈನ್ ಮೂಲಕ ಕಡ್ಡಾಯವಾಗಿ C-Form ನಲ್ಲಿ ದಾಖಲಿಸಿಕೊಳ್ಳುವುದು. C-Form ನಲ್ಲಿ ವಿದೇಶೀಯರು ವಾಸ್ತವ್ಯವಿರುವ ಮತ್ತು ನಿರ್ಗಮಿಸುವ ಸಮಯ ಹಾಗೂ ದಿನಾಂಕವನ್ನು ಕಡ್ಡಾಯವಾಗಿ ನಮೂದಿಸುವಂತೆ ಹಾಗೂ ವಿದೇಶಿ ವಿದ್ಯಾರ್ಥಿಗಳ ಮಾಹಿತಿಯನ್ನು ಆನ್‌ಲೈನ್ ಮೂಖಾಂತರ S-Form ನಲ್ಲಿ ಮಾಹಿತಿಗಳನ್ನು ಸರಿಯಾಗಿ ನಮೂದಿಸುವಂತೆ ನಗರದ ಶಿಕ್ಷಣ ಸಂಸ್ಥೆಗಳು/ವಿಶ್ವವಿದ್ಯಾನಿಲಯಗಳು ಸೂಕ್ತ ಕ್ರಮವಹಿಸುವಂತೆ ಕೋರಲಾಗಿದೆ.

ಉಪ ಪೊಲೀಸ್ ಆಯುಕ್ತರು
ಕಾನೂನು ಮತ್ತು ಸುವ್ಯವಸ್ಥೆ
ಮಂಗಳೂರು ನಗರ, ಮಂಗಳೂರು

(ಕಾನೂನು ಮತ್ತು ಸುವ್ಯವಸ್ಥೆ
ಮಂಗಳೂರು ನಗರ, ಮಂಗಳೂರು